ಮನುಷ್ಯನ ಆಕ್ರಮ ಪ್ರವೃತ್ತಿಗೆ ಹಿಡಿದ ಕನ್ನಡಿ. ಮನುಷ್ಯ ಪ್ರಜ್ಞೆ ಹೆಚ್ಚು ಸಂವೇದನಾಶೀಲವಾದಂತೆ ಮತ್ತು ಸಾಮಾಜಿಕ ಜೀವನ ವಿಧಾನಕ್ಕೆ ಮಾನವ ಒಗ್ಗಿಕೊಂಡ ಮೇಲೆ, ದೇವರು ಧರ್ಮದ ಆವಿಷ್ಕಾರದೊಂದಿಗೆ ಪಾಪಪ್ರಜ್ಞೆ ಎಂಬುದು ಪ್ರಚಲಿತಗೊಂಡಿರಬಹುದು. ಹುಟ್ಟಿನಿಂದಲೇ ಪರಹಿಂಸೆ, ಪರಪೀಡನೆ ಪಾಪ ಎಂದು ಮನೆ ಒಳಗೆ ಹೊರಗೆ ಬೋಧಿಸಲಾಗುತ್ತದಲ್ಲವೆ. ಹೀಗಾಗಿ ಪಾಪಪ್ರಜ್ಞೆ ಎಂಬುದು ನಮ್ಮ ವ್ಯಕ್ತಿತ್ವದ ಭಾಗವಾಗಿಯೇ ಬೆಳೆದು ಬರುತ್ತದೆ.



ನನ್ನ ಪಾಪಪ್ರಜ್ಞೆಯ ಪಡಿಪಾಟಲನ್ನು ಹೇಳಲು ಇಷ್ಟೆಲ್ಲಾ ಪೀಠಿಕೆ ಹಾಕಬೇಕಾಯಿತು. ನನ್ನ ಪಾಪಪ್ರಜ್ಞೆ ಸೊಳ್ಳೆಗಳೊಂದಿಗೆ ತಳಕು ಹಾಕಿಕೊಂಡಿವೆ. ನನ್ನ ಇತರ ಕೆಲವು ತಪ್ಪುಒಪ್ಪುಗಳು ಇರಬಹುದಾದರೂ ಅವು ಸೊಳ್ಳೆ ಸಂಹಾರದಷ್ಟು ಗಂಭೀರವಲ್ಲ. ಇಲ್ಲಿ ಜೀವಹಾನಿ ಇದೆ. ನನ್ನ ನಾಲ್ಕಾರು ದಶಕಗಳ ಜೀವನಯಾತ್ರೆಯಲ್ಲಿ ರಾಜ್ಯದುದ್ದಕ್ಕು ಅಲ್ಲಲ್ಲಿ ವಾಸಿಸುತ್ತ, ಸೊಳ್ಳೆಗಳೊಂದಿಗೆ ಏಗುತ್ತ, ಅನುಸಂಧಾನ ನಡೆಸುತ್ತ, ಅವುಗಳಿಗೆ ರಕ್ತದಾನ ಮಾಡುತ್ತ, ಅವುಗಳನ್ನು ಸಂಹರಿಸುತ್ತ ಬಂದಿದ್ದೇನೆ. ಅದು ಈಗಲೂ ದಿನಾಲು ಅನಿವಾರ್ಯವಾಗಿ ಮುಂದುವರಿಯುತ್ತಿದ್ದು, ಆಗಾಗ ಅದು ನನ್ನನ್ನು ಪಾಪಪ್ರಜ್ಞೆಯಿಂದ ಬಳಲುವಂತೆ ಮಾಡುತ್ತಿದೆ. ಸೊಳ್ಳೆಗಳ ದೈನಂದಿನ ಹತ್ಯೆಯೇ ನನ್ನ ಪಾಪಪ್ರಜ್ಞೆಯ ಮೂಲ. ಸೊಳ್ಳೆ ಯಾವ ಮಹಾಜೀವಿ, ಅದರ ಸಂಹಾರ ಏಕೆ ನಿಮ್ಮನ್ನು ಬಾಧಿಸಬೇಕು ಎಂದು ನೀವು ಅನ್ನಬಹುದು. ಆದರೆ, ದೇವರ ಸೃಷ್ಟಿಯಲ್ಲಿ ಎಲ್ಲ ಜೀವಗಳು ಒಂದೇ ಅಲ್ಲವೆ. ಯಾವ ಜೀವಿಗಳೂ ಯಕಃಶ್ಚಿತವಲ್ಲ. ಮನುಷ್ಯನ ದೇಹದ ಗಾತ್ರಕ್ಕೆ ಹೋಲಿಸಿದರೆ ಸೊಳ್ಳೆಗಳ ದೇಹದ ಗಾತ್ರ ನಗಣ್ಯ, ಆದರೆ ಅವು ಉಂಟು ಮಾಡುವ ಯಾತನೆ ಸಣ್ಣದಲ್ಲ. ಕೆಲವೇ ಸೊಳ್ಳೆಗಳು ಸೇರಿದರೂ ಮನುಷ್ಯನ ರಾತ್ರಿಗಳನ್ನು ನರಕ ಮಾಡಬಲ್ಲವು. ಅವುಗಳಿಗೆ ಅವುಗಳನ್ನು ಸೃಷ್ಟಿಸಿದಾತ ವಹಿಸಿರುವ ಕೆಲಸವನ್ನು ಅವು ನಿಷ್ಠೆಯಿಂದ ಮಾಡುತ್ತ ಬದುಕುತ್ತಿರುತ್ತವೆ ಎಂಬುದು ನನ್ನ ಅಂಬೋಣ. ಮನುಷ್ಯ ಮತ್ತು ಇತರ ಕೆಲವು ಪ್ರಾಣಿಗಳ ರಕ್ತ ಹೀರುತ್ತ ಆ ಜೀವಿಗಳಿಗೆ ಆ ಮೂಲಕ ಕೆಲವು ರೋಗ ರುಜಿನಗಳನ್ನು ದಯಪಾಲಿಸಿ ಅವುಗಳ ಸಂಖ್ಯೆಯನ್ನು ನಿಯಂತ್ರಿಸುವ ಹೊಣೆಯನ್ನು ಸೃಷ್ಟಿಕರ್ತ ಸೊಳ್ಳೆಗಳಿಗೆ ವಹಿಸಿದಂತೆ ತೋರುತ್ತದೆ. ಅವುಗಳನ್ನು ಕೊಲ್ಲುವುದೆಂದರೆ ಸೃಷ್ಟಿಕರ್ತನ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಿದಂತೆ ಅನಿಸುತ್ತದೆ. ಆದರೆ, ಮನುಷ್ಯ ಇತರ ಜೀವಿಗಳನ್ನು ಸಂಹರಿಸುತ್ತ ತಾನೇತಾನಾಗಿ ಭೂಮಿಯ ಮೇಲೆ ಮೆರೆಯತೊಡಗಿದಂತೆ ಇತರ ಜೀವಜಂತುಗಳ ಜೀವಕ್ಕೆ ಕುತ್ತು ಬಂದು ಕೆಲವು ಜೀವಿಗಳು ಅಳಿದು ಹೋಗಿ ಇನ್ನೂ ಕೆಲವು ಅಳಿವಿನಂಚಿಗೆ ಬಂದು ನಿಂತಿವೆ. ಆದರೆ, ಸೊಳ್ಳೆಯಂತಹ ಸಣ್ಣ ಜೀವಿಗಳು ರಕ್ತಬೀಜಾಸುರರಂತೆ ಗಟ್ಟಿಯಾಗಿ ಬಾಳಿಬದುಕಿ ಮಾನವನಿಗೆ ಸಡ್ಡು ಹೊಡೆದು ನಿಂತಿವೆ. ಅವುಗಳ ಸಂಹಾರಕ್ಕೆ ಮನುಷ್ಯ ಏನೆಲ್ಲ ಕ್ರಮವಹಿಸಿದರೂ ಅವು ತಮ್ಮ ಕಾಯಕವನ್ನು ಶ್ರದ್ಧೆಯಿಂದ ಮುಂದುವರೆಸಿವೆ.

ಸೊಳ್ಳೆಗಳನ್ನು ಹೊಡೆದು ಸಾಯಿಸುವಾಗ ಇತರ ಜೀವಿಗಳಿಗೆ ಅಥವಾ ನಮಗಾಗುವಷ್ಟೇ ಯಾತನೆ, ಹಿಂಸೆ ಅವುಗಳಿಗೂ ಆಗುತ್ತದಲ್ಲವೇ. ಅದೇ ನನ್ನ ಪಾಪಪ್ರಜ್ಞೆಯ ಮೂಲ. ಸೊಳ್ಳೆಗಳ ಹನನ ದಿನಾಲು ಮುಸ್ಸಂಜೆ ಆರಂಭವಾಗಿ, ರಾತ್ರಿ ಎಲ್ಲ ನಡೆದು ಮುಂಜಾನೆ ಕೂಡಾ ಮುಂದುವರಿದಿರುತ್ತದೆ. ಒಮ್ಮೊಮ್ಮೆ ಹಗಲಲ್ಲೂ ಕೂಡ. ಮೊದಲೆಲ್ಲ ಸೊಳ್ಳೆಗಳನ್ನು ಸಾಯಿಸುವುದು ಬೇಡ ಎಂದು ಹೊಗೆಹಾಕಿ ಅವುಗಳನ್ನು ಹೊರಹಾಕುತ್ತಿದ್ದೆವು. ಸೊಳ್ಳೆ ಪರದೆ ಬಳಸುತ್ತ ಅವುಗಳಿಂದ ರಕ್ಷಣೆ ಪಡೆದು ಮುಂಜಾನೆ ಕಿಟಕಿ ಬಾಗಿಲುಗಳ ಮೂಲಕ ಹೊರಹೋಗಲು ಅವುಗಳಿಗೆ ಅನುವು ಮಾಡಿ ಕೊಡುತ್ತಿದ್ದೆವು. ಸೊಳ್ಳೆಗಳ ಗೃಹ ಪ್ರವೇಶಕ್ಕೆ ಮತ್ತು ನಿರ್ಗಮನಕ್ಕೆ ಹೆಬ್ಬಾಗಿಲೇ ಆಗಬೇಕೆಂದಿಲ್ಲ. ಅವು ಯಾವ ಮಾಯೆಯಿಂದ ಮನೆಯೊಳಗೆ ಬರುತ್ತವೆ ಎಂಬುದೇ ತಿಳಿಯದು. ಒಮ್ಮೆ ಅವು ಒಳಗೆ ಬಂದರೆ ಮುಗಿಯಿತು. ಸಮಯ ಸಾಧಿಸಿ ನಾವು ಕುಳಿತಲ್ಲಿ, ನಿಂತಲ್ಲಿ, ಮಲಗಿದಲ್ಲಿ ನಮ್ಮ ರಕ್ತ ಹೀರುವ ಕಾಯಕವನ್ನು ಮಾಡುತ್ತಲೇ ಇರುತ್ತವೆ. ರಾತ್ರಿ ಹೊತ್ತು ಅವು ಹೆಚ್ಚು ಕ್ರಿಯಾಶೀಲವಾಗಿರುತ್ತವೆ. ಇತ್ತೀಚೆಗೆ ಅವುಗಳಿಗೆ ಸಮಯಾಸಮಯವೆಂಬುದೇ ಇಲ್ಲ. 'ಸಮಯಾಸಮಯ ಉಂಟೆ ರಕ್ತವತ್ಸಲ' ನಿನಗೆ ಎಂಬಂತೆ. ಸೊಳ್ಳೆಗಳ ಪೀಡೆಯ ಅನುಭವ ಇರದವರಾರು. ತಮಗೆ ಸೊಳ್ಳೆಗಳ ಕುರಿತು ಹೆಚ್ಚಿಗೆ